REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ


# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 41 । 14 ಜನವರಿ 2026 । ಬುಧವಾರ । ಪುಟಗಳು : 8 । ಬೆಲೆ : 2/-




## ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾಗಿ ಸನ್ಮಾನ್ಯ ಶ್ರೀ ಎಚ್.ಕೆ. ಪಾಟೀಲರವರು ಮತ್ತು ಉಪಾಧ್ಯಕ್ಷರಾಗಿ ಶ್ರೀ ಬಿ.ಎಸ್. ಪರಮಶಿವಯ್ಯರವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ


ಶ್ರೀ ಎಚ್.ಕೆ. ಪಾಟೀಲ
ಅಧ್ಯಕ್ಷರು


ಶ್ರೀ ಬಿ.ಎಸ್. ಪರಮಶಿವಯ್ಯ
ಉಪಾಧ್ಯಕ್ಷರು

**ಬೆಂಗಳೂರು** : 2026–2031ನೇ ಸಾಲಿನ ಐದು ವರ್ಷಗಳ ಅವಧಿಗೆ ದಿನಾಂಕ : 12.01.2026ರಂದು ಜರುಗಿದ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಪದಾಧಿಕಾರಿಗಳ ಚುನಾವಣೆಯಲ್ಲಿ ಮಹಾಮಂಡಳದ ಅಧ್ಯಕ್ಷರಾಗಿ ಸನ್ಮಾನ್ಯ ಶ್ರೀ ಎಚ್.ಕೆ. ಪಾಟೀಲರವರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಬಿ.ಎಸ್. ಪರಮಶಿವಯ್ಯರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಮಹಾಮಂಡಳದ ಚುನಾವಣಾ ರಿಟರ್ನಿಂಗ್ ಆಫೀಸರ್ ಡಾ॥ ಬಿ.ಆರ್.ಹರೀಶ್ ರವರು ತಿಳಿಸಿರುತ್ತಾರೆ. ಕರ್ನಾಟಕ ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಹಿರಿಯ ಸಹಕಾರಿಗಳು ತುಂಬು ಹೃದಯದಿಂದ ಅವರುಗಳನ್ನು ಅಭಿನಂದಿಸಿದ್ದಾರೆ. ಮಹಾಮಂಡಳದ ಆಡಳಿತ ಮಂಡಳಿ ನಿರ್ದೇಶಕರುಗಳಾದ ಶ್ರೀ ದೇವಗೌಡಾ ತಮ್ಮನಗೌಡಾ ಪಾಟೀಲ, ಶ್ರೀ ಅಶೋಕ ಮಲ್ಲಪ್ಪ ಮನಗೂಳಿ, ಶ್ರೀ ಮಲಕಣ್ಣ ಡಿ. ಪಾಟೀಲ, ಶ್ರೀ ರಮೇಶ್ ಬಾಬು, ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ, ಶ್ರೀ ಎಸ್.ಬಿ.ಎಂ. ಮಂಜು, ಶ್ರೀ ಎಸ್.ಪಿ. ಶೇಷಾದ್ರಿ, ಶ್ರೀ ಎಂ.ಕೆ. ಪಟ್ಟಣಶೆಟ್ಟಿ, ಶ್ರೀ ಎಮ್.ಎಮ್. ಮೆಟಗುಡ್ಡ, ಶ್ರೀ ಷಣ್ಮುಖಪ್ಪ ಮುಚ್ಚಂಡಿ, ಶ್ರೀ ಎಂ.ಆರ್.ವೆಂಕಟೇಶ್, ಶ್ರೀ ಎನ್.ಎಂ.ಸುರೇಶ್, ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯ, ಶ್ರೀ ರಾಜನಹಳ್ಳಿ ಜಿ. ಶ್ರೀನಿವಾಸಮೂರ್ತಿ, ಶ್ರೀಮತಿ ಬನಶಂಕರಿ ಹೆಚ್.ಆರ್. ಶ್ರೀ ಆನಂದಗೌಡ ಎನ್. ಬಿರಾದಾರ ರವರುಗಳು ಸಭೆಯಲ್ಲಿ ಹಾಜರಿದ್ದರು.

## ಆರ್‌ಬಿಐನಿಂದ ಸಹಕಾರ ಬ್ಯಾಂಕುಗಳಿಗೆ ಸಂಬಂಧಿತ ಸಾಲ ನಿಯಮಗಳ ತಿದ್ದುಪಡಿ : ಏಪ್ರಿಲ್ 1, 2026ರಿಂದ ಜಾರಿಗೆ

**ಮುಂಬೈ** : ರಿಸರ್ವ್ ಬ್ಯಾಂಕ್ ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಗ್ರಾಮೀಣ ಸಹಕಾರ ಬ್ಯಾಂಕುಗಳಿಗೆ ಕ್ರೆಡಿಟ್ ಅಪಾಯ ನಿರ್ವಹಣೆ ಮತ್ತು ಸಂಬಂಧಿತ ಸಾಲ ನೀಡುವ ಬಗ್ಗೆ ತಿದ್ದುಪಡಿ ನಿರ್ದೇಶನಗಳು, 2026 ಅನ್ನು ಹೊರಡಿಸಿದೆ. ಈ ನಿರ್ದೇಶನಗಳನ್ನು ಜನವರಿ 5, 2026 ರಂದು ತಿಳಿಸಲಾಯಿತು ಮತ್ತು ಏಪ್ರಿಲ್ 1, 2026 ರಿಂದ ಜಾರಿಗೆ ಬರಲಿದೆ.

ತಿದ್ದುಪಡಿ ಮಾಡಿದ ಚೌಕಟ್ಟಿನ ಅಡಿಯಲ್ಲಿ, ಆರ್‌ಬಿಐಯು ನಿರ್ದೇಶಕರು, ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ, ನಿರ್ದಿಷ್ಟ ಉದ್ಯೋಗಿಗಳು, ಸಂಬಂಧಿತ ವ್ಯಕ್ತಿಗಳು ಮತ್ತು ಸಂಬಂಧಿತ ವ್ಯಾಖ್ಯಾನಗಳನ್ನು ವಿಸ್ತರಿಸಿದೆ. ಸಹಕಾರ ಬ್ಯಾಂಕುಗಳು ತಮ್ಮ ಮಂಡಳಿಯಿಂದ ಅನುಮೋದಿತ ಕ್ರೆಡಿಟ್ ಅಪಾಯ ನಿರ್ವಹಣಾ ನೀತಿಗಳಲ್ಲಿ ಸಂಬಂಧಿತ ಸಾಲದ ಕುರಿತು ನಿರ್ದಿಷ್ಟ ನಿಬಂಧನೆಗಳನ್ನು ಸೇರಿಸಲು ನಿರ್ದೇಶಿಸಲಾಗಿದೆ. ಸರ್ಕಾರಿ ಭದ್ರತೆಗಳು, ಜೀವ ವಿಮಾ ಪಾಲಿಸಿಗಳು ಅಥವಾ ಸ್ಥಿರ ಠೇವಣಿಗಳಿಂದ ಸಂಪೂರ್ಣವಾಗಿ ಸುರಕ್ಷಿತವಾಗಿರುವ ಸಾಲ ಸೌಲಭ್ಯಗಳನ್ನು ಹೊರತುಪಡಿಸಿ, ನಿರ್ದೇಶಕರ ಸಂಬಂಧಿಕರಿಗೆ ಮತ್ತು ಅಂತಹ ಸಂಬಂಧಿಕರು ಹೊಂದಿರುವ ಸಂಸ್ಥೆಗಳು ಅಥವಾ ಕಂಪನಿಗಳಿಗೆ ಸಾಲ ನೀಡುವುದನ್ನು ಈ ನಿರ್ದೇಶನಗಳು ನಿಷೇಧಿಸುತ್ತವೆ. ಸಂಬಂಧಿತ ಪಕ್ಷದ ಸಾಲಗಳಿಗೆ ಮೆಟೀರಿಯಲಿಟಿ ಮಿತಿಗಳನ್ನು ನಿಗದಿಪಡಿಸಲಾಗಿದೆ ಮತ್ತು ಈ ಮಿತಿಗಳನ್ನು ಮೀರಿದ ಮಾನ್ಯತೆಗಳಿಗೆ ಮಂಡಳಿಯ ಅನುಮೋದನೆಯ ಅಗತ್ಯವಿರುತ್ತದೆ. ಆಸಕ್ತ ಸಾಲಗಳ ಮರುಪಾವತಿ ನಿರಾಕರಣೆ, ಲೆಕ್ಕಪರಿಶೋಧನೆಯ ಮೂಲಕ ನಿಯತಕಾಲಿಕ ಮೇಲ್ವಿಚಾರಣೆ ಮತ್ತು ವಿಚಲನಗಳನ್ನು ವರದಿ ಮಾಡುವ ಅವಶ್ಯಕತೆಗಳನ್ನು ಆರ್‌ಬಿಐ ನಿಗದಿಪಡಿಸಿದೆ. ಅಸ್ತಿತ್ವದಲ್ಲಿರುವ ಅನುಸರಣೆಯಿಲ್ಲದ ಸಂಬಂಧಿತ ಸಾಲಗಳು ಮುಕ್ತಾಯದವರೆಗೆ ಮುಂದುವರಿಯಬಹುದು ಆದರೆ ತಿದ್ದುಪಡಿ ಮಾಡಿದ ನಿರ್ದೇಶನಗಳನ್ನು ಪಾಲಿಸದ ಹೊರತು ನವೀಕರಿಸಲಾಗುವುದಿಲ್ಲ ಅಥವಾ ವರ್ಧಿಸಲಾಗುವುದಿಲ್ಲ.

ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಶೇ.7.4 — 2
ಜನವರಿ 28 ರಿಂದ ಕೇಂದ್ರ ಬಜೆಟ್ ಅಧಿವೇಶನ ಆರಂಭ ಫೆಬ್ರವರಿ 1 ರಂದು ಬಜೆಟ್ ಮಂಡನೆ — 4
ನಿಮ್ಮ ಪ್ರಶ್ನೆ ನಮ್ಮ ಉತ್ತರ — 6

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



## ಉದ್ಯಮಿಗಳ ಸಾಲ ಮನ್ನಾ : ಎಚ್ಚೆತ್ತುಕೊಳ್ಳಬೇಕಿದೆ

ಪ್ರಸ್ತುತ ಹಣಕಾಸು ವರ್ಷವೂ ಒಳಗೊಂಡಂತೆ ಕಳೆದ 5 ಹಣಕಾಸು ವರ್ಷಗಳಲ್ಲಿ ಅಂದರೆ ಒಟ್ಟು ಐದೂವರೆ ವರ್ಷಗಳಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು ರೂ.6,15,647 ಲಕ್ಷ ಕೋಟಿ ಸಾಲಗಳನ್ನು ರೈಟ್ ಆಫ್ ಮಾಡಿವೆ ಎಂದು ಕೇಂದ್ರ ಹಣಕಾಸು ರಾಜ್ಯ ಸಚಿವರು ಸಂಸತ್ತಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ತಿಳಿಸಿದ್ದಾರೆ. ಪ್ರತಿ ಹಣಕಾಸು ವರ್ಷದಲ್ಲೂ ಹೀಗೆ ಮನ್ನಾವಾಗಿರುವುದು ಬೃಹತ್ ಉದ್ಯಮಿಗಳ, ಕೈಗಾರಿಕೋದ್ಯಮಿಗಳ, ಶ್ರೀಮಂತರುಗಳು ಮಾಡಿದ ಸಾಲಗಳಾಗಿವೆ. ಹೀಗೆ ಉದ್ದೇಶಪೂರ್ವಕವಾಗಿ ಸಾಲ ಮರು ಪಾವತಿಸದೆ ಮನ್ನಾವಾಗಿರುವ ಮೊತ್ತ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. ಬೃಹತ್ ಉದ್ಯಮಿಗಳು, ಕೈಗಾರಿಕೋದ್ಯಮಿಗಳು ಸಾಲ ಪಾವತಿಸದೆ ತಮ್ಮ ಪ್ರಭಾವ ಬೀರಿ ಮನ್ನಾ ಮಾಡಿಸಿಕೊಳ್ಳುವುದು ಕಳವಳಕಾರಿಯಾಗಿದೆ. ಅಲ್ಲದೆ, ಇದು ಮುಂದಿನ ದಿನಗಳಲ್ಲಿ ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ತೀವ್ರ ಆರ್ಥಿಕ ಒತ್ತಡ ಉಂಟು ಮಾಡುತ್ತದೆ. ಈಗಾಗಲೆ, ಖಾಸಗಿ ಮತ್ತು ಸಾರ್ವಜನಿಕ ಬ್ಯಾಂಕುಗಳಲ್ಲಿ ಸಾಲ–ಠೇವಣಿ ಅನುಪಾತವು ಶೇ.81ಕ್ಕೆ ಮುಟ್ಟಿದೆ. ಕಾರಣ, ಗ್ರಾಹಕರು ಬ್ಯಾಂಕಿನಲ್ಲಿ ಠೇವಣಿ ಇಡಲು ಮುಂದಾಗುತ್ತಿಲ್ಲ. ಇನ್ನೊಂದೆಡೆ ಸಾಲಕ್ಕಾಗಿ ವಿವಿಧ ವಲಯಗಳಿಂದ ಬೇಡಿಕೆ ಮಾತ್ರ ದಿನೇದಿನೆ ಬೆಳೆಯುತ್ತಲೇ ಇದೆ.

ಈ ರೀತಿಯಾಗಿ ಬೃಹತ್ ಸಾಲಮನ್ನಾ ಮಾಡುವುದು ಯಾವುದೇ ರೀತಿಯಲ್ಲು ಸಮರ್ಥನೀಯವಲ್ಲ. ಇದು ಬ್ಯಾಂಕುಗಳ ಠೇವಣಿ ಸಂಗ್ರಹಿಸುವ, ಸಾಲ ನೀಡುವ ವ್ಯವಸ್ಥೆ ನಿರ್ವಹಿಸುವ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುತ್ತದೆ. ಸಾಲಮನ್ನಾ ಮಾಡುತ್ತಿರುವ ಹಣವು ಜನರು ಬ್ಯಾಂಕುಗಳಲ್ಲಿ ಇಟ್ಟ ಠೇವಣಿಯೇ ಹೊರತು ಬೇರಾವುದೂ ಹಣವಲ್ಲ. ನಿಜ, ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರ ಬ್ಯಾಂಕುಗಳಿಗೆ ಆದ ನಷ್ಟವನ್ನು ಭರ್ತಿ ಮಾಡಿಕೊಡುತ್ತದೆ. ಅದು ಕೂಡ ಜನರು ತೆತ್ತ ತೆರಿಗೆ ಹಣವೇ ಹೊರತು ಬೇರಾವುದೊ ಹಣವಲ್ಲ ಎನ್ನುವುದನ್ನು ನಾವೆಲ್ಲರೂ ಅರಿಯಬೇಕಿದೆ. ಆರ್ಥಿಕ ಅಬಲರಿಗೆ, ಶೋಷಿತ, ಹಿಂದುಳಿದ ಸಮುದಾಯಗಳನ್ನು ಮೇಲೆತ್ತುವ ಜವಾಬ್ದಾರಿ ಯಾವುದೇ ಜನಪರ, ಪ್ರಗತಿಪರ ಸರ್ಕಾರದ್ದಾಗಿರುತ್ತದೆ. ಈ ವರ್ಗದ ಜನರಿಗೆ ಅಲ್ಪ ಸ್ವಲ್ಪ ಸವಲತ್ತುಗಳನ್ನು ನೀಡುವ ಸಲುವಾಗಿ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಿದರೆ, ಬಡ ರೈತರ ಸಾಲಮನ್ನಾ ಮಾಡಿದರೆ, ದೇಶ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಬೊಬ್ಬಿರಿಯುವ ಒಂದು ಮಂದ ದೃಷ್ಟಿಯ ವರ್ಗವಿದೆ. ಬೃಹತ್ ಉದ್ಯಮಿಗಳ, ಕೈಗಾರಿಕೋದ್ಯಮಿಗಳ, ಶ್ರೀಮಂತರುಗಳು ಮಾಡಿದ ಸಾವಿರಾರು ಕೋಟಿ ರೂಪಾಯಿ ಸಾಲಗಳನ್ನು ಮನ್ನಾ ಮಾಡಿದಾಗ ದೇಶ ಆರ್ಥಿಕವಾಗಿ ದಿವಾಳಿಯಾಗುವುದಿಲ್ಲವೇ?

ಒಂದೆಡೆ ಸಿರಿವಂತ ಉದ್ದಿಮೆದಾರರು ತಾವು ಕಟ್ಟಬೇಕಾದ ತೆರಿಗೆಗೆ ವಿನಾಯಿತಿಯನ್ನೂ ಪಡೆದುಕೊಳ್ಳುತ್ತಾರೆ, ಇನ್ನೊಂದೆಡೆ ತಾವು ಬ್ಯಾಂಕುಗಳಿಗೆ ಕಟ್ಟಬೇಕಾದ ಸಾಲಗಳನ್ನೂ ಮನ್ನಾ ಮಾಡಿಸಿಕೊಳ್ಳುತ್ತಾರೆ. ಇದರಿಂದ ಅವರುಗಳ ಶ್ರೀಮಂತಿಕೆಯ ಬೊಜ್ಜು ಬೆಳೆಯುತ್ತದೆಯೇ ಹೊರತು, ಯಾವುದೇ ಪ್ರಯೋಜನವಿಲ್ಲ. ಬದಲಿಗೆ ಆರ್ಥಿಕ ದುರ್ಬಲರ, ಶೋಷಿತ ವರ್ಗದ ಜನರಪರ ಕಲ್ಯಾಣಕ್ಕಾಗಿ ಯೋಜನೆಗಳನ್ನು ರೂಪಿಸಿ, ಜಾರಿಗೊಳಿಸಿದ್ದೇ ಆದರೆ, ಆಗ ನಿಜವಾದ ಅರ್ಥದಲ್ಲಿ ನಮ್ಮ ದೇಶ ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ದೃಢವಾಗಿ ಬೆಳೆಯುತ್ತದೆ ಹಾಗೂ ಜಗತ್ತಿನ ಬಹುದೊಡ್ಡ ಆರ್ಥಿಕತೆಯಾಗಿ ಹೊರ ಹೊಮ್ಮುತ್ತದೆ ಎನ್ನುವ ವಿಶ್ವಾಸ ನನ್ನದು.

▸▸ ಎಚ್.ಕೆ. ಪಾಟೀಲ

## ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಶೇ.7.4

**ಹೊಸದಿಲ್ಲಿ:** ಈ ಹಣಕಾಸು ವರ್ಷ(2025–2026)ದಲ್ಲಿ ಆರ್ಥಿಕ ಬೆಳವಣಿಗೆ ಶೇ. 7.4ರಷ್ಟು ಇರಲಿದೆ ಎಂದು ಸಾಂಖ್ಯಿಕ ಮತ್ತು ಕಾರ್ಯಕ್ರಮ ಜಾರಿ ಸಚಿವಾಲಯ (ಎಂಒಎಸ್‌ಪಿಐ) ಅಂದಾಜಿಸಿದೆ. ಜಾಗತಿಕ ಬೆಳವಣಿಗೆಯ ಮಂದಗತಿ, ಸುಂಕಾಸ್ತ್ರದಿಂದ ಉಂಟಾಗಿರುವ ಬಿಕ್ಕಟ್ಟಿನ ನಡುವೆಯೂ ಏಷ್ಯಾದ 3ನೇ ಅತಿದೊಡ್ಡ ಆರ್ಥಿಕತೆಗೆ ಇರುವ ಸ್ಥಿತಿಸ್ಥಾಪಕ ಗುಣವನ್ನು ಈ ಬೆಳವಣಿಗೆ ಸೂಚಿಸುತ್ತದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಆರ್ಥಿಕ ಬೆಳವಣಿಗೆ ಶೇ.7.3 ಎಂದು ಆರ್‌ಬಿಐ ಅಂದಾಜಿಸಿತ್ತು. ಕಳೆದ ವರ್ಷ ಈ ಪ್ರಮಾಣ 6.5ರಷ್ಟಿತ್ತು.ಸೇವಾ ವಲಯದ ಪ್ರಗತಿಜಿಡಿಪಿ ಬಲವರ್ಧನೆಗೆ ಹೆಚ್ಚಿನ ಪಾಲು ಸಲ್ಲಿಸಲಿದೆ. ಅಮೆರಿಕ ಸುಂಕದಿಂದ ರಫ್ತು ವಹಿವಾಟಿನ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ. ಆದರೆ ಜಿಎಸ್‌ಟಿ 2.0 ಮೂಲಕ ದಿನ ಬಳಕೆಯ ನೂರಾರು ಉತ್ಪನ್ನಗಳ ಮೇಲೆ ಜಿಎಸ್‌ಟಿಯನ್ನು ಇಳಿಸಲಾಗಿದೆ.




ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸಲಾಗಿದೆ. ಆರ್‌ಬಿಐ ಬಡ್ಡಿ ದರಗಳನ್ನು ಇಳಿಸಿದೆ. ಹಣದುಬ್ಬರ ದಾಖಲೆ ಪ್ರಮಾಣದಲ್ಲಿ ಇಳಿದಿದೆ. ಗ್ರಾಮೀಣ ಪ್ರದೇಶದಲ್ಲಿ ಅನುಭೋಗ ಪ್ರಮಾಣ ಹೆಚ್ಚಿದೆ. ಇದೆಲ್ಲವೂ ನಮ್ಮ ಆರ್ಥಿಕತೆಯ ವೇಗವನ್ನು ಹೆಚ್ಚಿಸಲಿವೆ.

2023–24ರಲ್ಲಿ ಜಿಡಿಪಿ ಶೇ.9.2ರಷ್ಟಿತ್ತು. ಪ್ರಸಕ್ತ ಹಣಕಾಸು ವರ್ಷದಲ್ಲಿ ನಿವ್ವಳ ಮೌಲ್ಯವರ್ಧನೆ ಪ್ರಮಾಣ ಶೇ.7ಕ್ಕೆ ಏರಲಿದೆ. ಇದು 2024–25ರಲ್ಲಿ ಶೇ. 4.5ರಷ್ಟಿತ್ತು. ಸೇವಾ ವಲಯದ ಬೆಳವಣಿಗೆಯು 2024–25ರಲ್ಲಿ ಶೇ.7.2 ರಷ್ಟಿತ್ತು. ಇದರಿಂದ ಶೇ.9.1 ರಷ್ಟಾಗುತ್ತದೆ. ತಯಾರಿಕಾ ವಲಯದ ಬೆಳವಣಿಗೆ ಪ್ರಮಾಣ ಶೇ.7ಕ್ಕೆ ಜಿಗಿಯುತ್ತದೆ. ಇದು ಕಳೆದ ಹಣಕಾಸು ವರ್ಷದಲ್ಲಿ ಶೇ. 4.5ರಷ್ಟಿತ್ತು. ಕೃಷಿ ಮತ್ತು ಸಂಬಂಧಿತ ವಲಯದ ಬೆಳವಣಿಗೆಯು 2024–25 ರಲ್ಲಿ ಶೇ.4.6 ರಿಂದ ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ.3.1ಕ್ಕೆ ಕುಸಿಯುವ ಸಂಭವವಿದೆ.

# ಕೇಂದ್ರ ಬಜೆಟ್ 2026-27 : ರಾಜ್ಯಕ್ಕೆ ಹೆಚ್ಚಿನ ಅನುದಾನ ಒದಗಿಸುವಂತೆ ಸರ್ಕಾರದ ಒತ್ತಾಯ

**ಬೆಂಗಳೂರು:** ಫೆಬ್ರವರಿ 1 ರಂದು ಮಂಡಿಸಲಾಗುವ 2026–27ರ ಬಜೆಟ್‌ನಲ್ಲಿ ಕರ್ನಾಟಕ ರಾಜ್ಯಕ್ಕೆ ಸಾಕಷ್ಟು ಅನುದಾನ ಹಂಚಿಕೆಯನ್ನು ಖಚಿತಪಡಿಸಿಕೊಳ್ಳುವ ಮೂಲಕ ಹಣಕಾಸು ಸಮತೋಲನವನ್ನು ಪುನಃಸ್ಥಾಪಿಸಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಒತ್ತಾಯಿಸಿದೆ.




ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಭಾಗಿಯಾಗಿದ್ದು, ಈ ವೇಳೆ ರಾಜ್ಯದ ಬೇಡಿಕೆಗಳನ್ನು ಕೇಂದ್ರ ಸರ್ಕಾರದ ಮುಂದಿಟ್ಟಿದ್ದಾರೆ.

ರಾಷ್ಟ್ರ ಅಭಿವೃದ್ಧಿಯಲ್ಲಿ ಕರ್ನಾಟಕ ದೊಡ್ಡ ಕೊಡುಗೆ ನೀಡುತ್ತಿದೆ. ಆದರೆ, ಜಿಎಸ್‌ಟಿ ದರ ಬದಲಾವಣೆ, ಹವಾಮಾನ ವೈಪರೀತ್ಯ, ಹೆಚ್ಚುತ್ತಿರುವ ಸಾಮಾಜಿಕ ಬದ್ಧತೆ ಹಾಗೂ ವೇಗದ ನಗರೀಕರಣದಿಂದ ಹಣಕಾಸು ಸ್ಥಿತಿ ಸಂಕೀರ್ಣಗೊಳ್ಳುತ್ತಿದೆ. ರಾಜ್ಯಗಳ ಹೊಣೆಗಾರಿಕೆಗಳು ಅವುಗಳ ಆದಾಯಗಳಿಗಿಂತ ವೇಗವಾಗಿ ವಿಸ್ತರಿಸಿಕೊಂಡಿದ್ದು, 2026–27 ಬಜೆಟ್‌ನಲ್ಲಿ ಸರಿಯಾದ ಹಣಕಾಸು ಉಪಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಎಸ್‌ಟಿ ಸರಳೀಕರಣದ ಬಳಿಕ ಕರ್ನಾಟಕದ ಜಿಎಸ್‌ಟಿ ಬೆಳವಣಿಗೆ ಶೇ. 12ರಿಂದ ಶೇ.5ಕ್ಕೆ ಇಳಿಕೆಯಾಗಿದೆ. ಇದರಿಂದ ಈ ವರ್ಷ ಸುಮಾರು ರೂ.5,000 ಕೋಟಿ ಕೊರತೆಯಾಗಿದ್ದು, ವಾರ್ಷಿಕ ರೂ.9,000 ಕೋಟಿ ಆದಾಯ ಕೊರತೆಯಾಗಲಿದೆ. ಕೇಂದ್ರ ಸರ್ಕಾರ ಪಾನ್ ಮಸಾಲ ಮೇಲಿನ ಸೆಸ್ ಮತ್ತು ತಂಬಾಕು ಮೇಲಿನ ಸುಂಕದ ಮೂಲಕ ತನ್ನ ನಷ್ಟವನ್ನು ಹೊಂದಿಸಿಕೊಂಡಿದೆ. ಆದರೆ, ರಾಜ್ಯಗಳಿಗೆ ಆ ಅವಕಾಶ ಇಲ್ಲದಾಗಿದೆ. ಹೀಗಾಗಿ ರಾಜ್ಯಗಳಿಗೆ ಸದೃಢ ಆದಾಯ ರಕ್ಷಣೆ ವ್ಯವಸ್ಥೆ ಕಲ್ಪಿಸಬೇಕು. ಆದಾಯ ನಷ್ಟಕ್ಕೆ ಸಂಪೂರ್ಣ ಪರಿಹಾರ ನೀಡುವಂತೆ ಮನವಿ ಮಾಡಿದ್ದಾರೆ.

ತಂಬಾಕು ಮೇಲೆ ವಿಧಿಸಲಾಗುವ ಸುಂಕ ಹಾಗೂ ಪಾನ್ ಮಸಾಲದ ಮೇಲಿನ ಸೆಸ್ ಅನ್ನು 50:50 ಅನುಪಾತದಲ್ಲಿ ಹಂಚಿ, ಒಕ್ಕೂಟ ಸಹಕಾರ ಮತ್ತು ವಿತ್ತೀಯ ಸಮಾನತೆಯನ್ನು ಮರುಸ್ಥಾಪಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಜಲಜೀವನ ಮಿಷನ್ ಯೋಜನೆಯ ಕೇಂದ್ರದ ಪಾಲಿನ ಬಾಕಿ ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದರು.

ಕೇಂದ್ರ ಸರ್ಕಾರ ಯೋಜನೆಯಡಿ ಈವರೆಗೆ ರೂ.11,786 ಕೋಟಿ ಹಣ ಬಿಡುಗಡೆ ಮಾಡಿದ್ದರೆ, ರಾಜ್ಯ ಸರ್ಕಾರ ರೂ. 24,598 ಕೋಟಿ ಹಣ ಬಿಡುಗಡೆ ಮಾಡಿದೆ. ಯೋಜನೆ ಅನುಷ್ಠಾನಕ್ಕೆ ಅಡ್ಡಿಯಾಗದಂತೆ ರಾಜ್ಯ ಸರ್ಕಾರ ಮುಂಗಡವಾಗಿ ಹೆಚ್ಚುವರಿ ರೂ. 13,004 ಕೋಟಿ ಬಿಡುಗಡೆ ಮಾಡಿದೆ. ಕೇಂದ್ರ ಸರ್ಕಾರ ಕೂಡಲೇ ಬಾಕಿ ಹಣ ಬಿಡುಗಡೆ ಮಾಡಬೇಕು ಎಂದು ಕೋರಿದ್ದಾರೆ.

ಬೇಡಿಕೆ ಆಧಾರಿತ MGNREGAಯಿಂದ ಅನುದಾನ ಹಂಚಿಕೆ–ಆಧಾರಿತ G-RAM-Gಗೆ ಬದಲಾಯಿಸುವುದರಿಂದ ಪರಿಣಾಮಕಾರಿ ಉದ್ಯೋಗ ದಿನಗಳು ಕಡಿಮೆಯಾಗಿವೆ. ಇದರಿಂದಾಗಿ 13 ಕೋಟಿ ಮಾನವ ದಿನಗಳ ಜೀವನೋಪಾಯ ಭದ್ರತೆಯನ್ನು ಒದಗಿಸುವುದನ್ನು ಮುಂದುವರಿಸಲು, ಕರ್ನಾಟಕಕ್ಕೆ ಸುಮಾರು ರೂ.2,000 ಕೋಟಿಗಳು ಬೇಕಾಗುತ್ತವೆ. ಇದನ್ನು ಒದಗಿಸಲು ವಿತ್ತೀಯ ಅವಕಾಶವಿರುವುದಿಲ್ಲ. ಅಲ್ಲದೆ, G-RAM-G ಯೋಜನೆಯಲ್ಲಿ ರಾಜ್ಯಗಳು ಕೂಡಾ ಅನುದಾನ ಹಂಚಿಕೆ ಮಾಡಬೇಕಾಗಿದ್ದು, ರಾಜ್ಯದ ಹೊರೆಯನ್ನು ಇದು ಹೆಚ್ಚಿಸಿದೆ. ಆದ್ದರಿಂದ ಯೋಜನಾ ವಿನ್ಯಾಸವನ್ನು ಮರುಪರಿಶೀಲಿಸಿ, ಬೇಡಿಕೆ ಆಧಾರಿತ ಉದ್ಯೋಗ ವ್ಯವಸ್ಥೆಯನ್ನು ಪುನಃ ಸ್ಥಾಪಿಸಿ, ಸಮರ್ಪಕ ಮತ್ತು ಮಿತಿರಹಿತ ಕೇಂದ್ರ ಅನುದಾನ ಒದಗಿಸುವಂತೆ ಮನವಿ ಮಾಡಿದ್ದಾರೆ.

ಅನೇಕ ಬೆಳೆಗಳಲ್ಲಿ ಕಡಿಮೆ ಖರೀದಿ ಮತ್ತು ಕೊಳೆಯುವಿಕೆಯಿಂದಾಗಿ ಕನಿಷ್ಠ ಬೆಂಬಲ ಬೆಲೆ (MSP) ಖರೀದಿ ಸಾಕಷ್ಟು ಪರಿಣಾಮಕಾರಿಯಾಗಿಲ್ಲ. ಮೆಕ್ಕೆಜೋಳ, ಸೋಯಾಬೀನ್, ಮಾವು, ಮೆಣಸಿನಕಾಯಿ, ಈರುಳ್ಳಿ, ಟೊಮೇಟೊ, ಅರಿಶಿನ ಮತ್ತು ಶುಂಠಿ ಸೇರಿದಂತೆ 8 ಬೆಳೆಗಳಿಗೆ PDPS ಜಾರಿಗೆ ಕರ್ನಾಟಕವು ಪ್ರಸ್ತಾಪಿಸಿದ್ದು, 2026–27ರಲ್ಲಿ ಸಮಯೋಚಿತ ಅನುಷ್ಠಾನಕ್ಕಾಗಿ PM-AASHA ಅಡಿಯಲ್ಲಿ ರೂ. 796 ಕೋಟಿ ಹೆಚ್ಚುವರಿ ಅನುದಾನ ನೀಡುವಂತೆ ಕೋರಿದ್ದಾರೆ.

ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಅಡುಗೆ ಸಿಬ್ಬಂದಿ ಮತ್ತು ಸಹಾಯಕಿಯರಿಗೆ ಕೇಂದ್ರ ಸರ್ಕಾರ ನೀಡುವ ಗೌರವಧನವು ಹಲವು ವರ್ಷಗಳಿಂದ ಹೆಚ್ಚಳವಾಗಿರುವುದಿಲ್ಲ. ಆದ್ದರಿಂದ ಕೇಂದ್ರ ಪಾಲನ್ನು ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರಿಗೆ ತಿಂಗಳಿಗೆ ರೂ. 8,000, ಅಡುಗೆ ಸಿಬ್ಬಂದಿ ಮತ್ತು ಸಹಾಯಕಿಯರಿಗೆ ತಿಂಗಳಿಗೆ ರೂ. 5,000, ರಾಷ್ಟ್ರೀಯ ಸಾಮಾಜಿಕ ಭದ್ರತಾ ಕಾರ್ಯಕ್ರಮದ (NSAP) ವ್ಯಾಪ್ತಿಯನ್ನು ಒಟ್ಟು ಅರ್ಹ ಫಲಾನುಭವಿಗಳ ಶೇ.50ಕ್ಕೆ ವಿಸ್ತರಿಸಿ, ಪಿಂಚಣಿ ಮೊತ್ತವನ್ನು ಹೆಚ್ಚಿಸುವಂತೆ ವಿನಂತಿಸಲಾಗಿದೆ.

ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಮತ್ತು 2023–24 ಕೇಂದ್ರ ಆಯವ್ಯಯದಲ್ಲಿ ಘೋಷಿಸಿದಂತೆ ರೂ. 5,300 ಕೋಟಿ ಕೇಂದ್ರ ಸಹಾಯವನ್ನು ಬಿಡುಗಡೆ ಮಾಡಲು ವಿನಂತಿಸಲಾಗಿದೆ.

15ನೇ ಹಣಕಾಸು ಆಯೋಗದ ಬಾಕಿ ಅನುದಾನ ಮತ್ತು ವಿಪತ್ತು ಪರಿಹಾರ ಮೊತ್ತಗಳನ್ನು ತ್ವರಿತವಾಗಿ ಬಿಡುಗಡೆ ಮಾಡುವಂತೆ ವಿನಂತಿಸಿದ್ದಾರೆ.

ವಿಶೇಷ ಅನುದಾನ ರೂ. 5,495 ಕೋಟಿ, ರಾಜ್ಯ ಕೇಂದ್ರಿತ ಅನುದಾನ ರೂ. 6,000 ಕೋಟಿ, 15ನೇ ಹಣಕಾಸು ಆಯೋಗದ ಅನುದಾನ ಕೊರತೆ ರೂ. 4,044 ಕೋಟಿ ರೂ. ಇದೆ ಎಂದು ವಿವರಿಸಿದ್ದಾರೆ.

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶವು ಕಡಿಮೆ ಅಂಕ ಹೊಂದಿದ್ದು, ಇದನ್ನು ಉತ್ತಮಗೊಳಿಸಲು ವಾರ್ಷಿಕ ರೂ. 5,000 ಕೋಟಿ ಅನುದಾನವನ್ನು ಹೆಚ್ಚುವರಿಯಾಗಿ ಒದಗಿಸುವಂತೆ ಮನವಿ ಮಾಡಿದ್ದಾರೆ. ಇದೇ ವೇಳೆ ವಿತ್ತೀಯ ಶಿಸ್ತು ಮತ್ತು ರಾಷ್ಟ್ರೀಯ ಬೆಳವಣಿಗೆಯತ್ತ ಕರ್ನಾಟಕದ ಬದ್ಧತೆಯನ್ನು ಪುನರುಚ್ಚರಿಸುತ್ತಾ, 2026–27ರ ಆಯವ್ಯಯದಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಹಣಕಾಸಿನ ಸಮತೋಲನವನ್ನು ಮತ್ತು ವಿಶ್ವಾಸವನ್ನು ಪುನಃ ಸ್ಥಾಪಿಸುವಂತೆ ಮನವಿ ಮಾಡಿದ್ದಾರೆ.

## ಜನವರಿ 28 ರಿಂದ ಕೇಂದ್ರ ಬಜೆಟ್ ಅಧಿವೇಶನ ಆರಂಭ ಫೆಬ್ರವರಿ 1 ರಂದು ಬಜೆಟ್ ಮಂಡನೆ





**ಹೊಸದಿಲ್ಲಿ :** ಬಹುನಿರೀಕ್ಷಿತ 2026ನೇ ಸಾಲಿನ ಸಂಸತ್ತಿನ ಬಜೆಟ್ ಅಧಿವೇಶನಕ್ಕೆ ದಿನಾಂಕ ನಿಗದಿಯಾಗಿದೆ. ಕೇಂದ್ರ ಸರ್ಕಾರವು ಅಧಿವೇಶನದ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಜನವರಿ 28 ರಿಂದ ಅಧಿವೇಶನ ಆರಂಭವಾಗಲಿದೆ ಎಂದು ತಿಳಿಸಿದೆ.

ಈ ಕುರಿತು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಬಜೆಟ್ ಅಧಿವೇಶನವನ್ನು ಎರಡು ಹಂತಗಳಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದ್ದಾರೆ. ಮೊದಲ ಹಂತ ಜನವರಿ 28 ರಂದು ಆರಂಭವಾಗಿ ಫೆಬ್ರವರಿ 13ರವರೆಗೆ ನಡೆಯಲಿದ್ದು, ಫೆಬ್ರವರಿ 13ರ ನಂತರ ಅಧಿವೇಶನಕ್ಕೆ ತಾತ್ಕಾಲಿಕ ವಿರಾಮ ನೀಡಲಾಗುತ್ತದೆ. ಈ ಸಮಯದಲ್ಲಿ ಸಂಸದೀಯ ಸ್ಥಾಯಿ ಸಮಿತಿಗಳು ವಿವಿಧ ಸಚಿವಾಲಯಗಳ ಅನುದಾನ ಬೇಡಿಕೆಗಳನ್ನು ಪರಿಶೀಲಿಸಲಿವೆ. ಎರಡನೇ ಹಂತದಲ್ಲಿ ಮಾರ್ಚ್ 9 ರಂದು ಕಲಾಪಗಳು ಪುನರಾರಂಭಗೊಂಡು ಏಪ್ರಿಲ್ 2ರವರೆಗೆ ಮುಂದುವರಿಯಲಿವೆ.

**ಫೆಬ್ರವರಿ 1 ರಂದು ಬಜೆಟ್ ಮಂಡನೆ :** ವಾಡಿಕೆಯಂತೆ ಫೆಬ್ರವರಿ 1ರಂದೇ ಕೇಂದ್ರ ವಿತ್ತ ಸಚಿವರು ಪೂರ್ಣ ಪ್ರಮಾಣದ ಕೇಂದ್ರ ಬಜೆಟ್ ಅನ್ನು ಮಂಡಿಸಲಿದ್ದಾರೆ. ವಿಶೇಷವೆಂದರೆ, ಈ ಬಾರಿ ಫೆಬ್ರವರಿ 1 ಭಾನುವಾರ ಬಂದಿದೆ. ಆದರೂ ಅದೇ ದಿನ ಬಜೆಟ್ ಮಂಡನೆಯಾಗಲಿದೆ. ಈ ಮೂಲಕ ಸಂಪ್ರದಾಯವನ್ನು ಹಣಕಾಸು ಸಚಿವರು ಮುಂದುವರಿಸಲಿದ್ದಾರೆ. ಜನವರಿ 29ರಂದು 2025-26ನೇ ಸಾಲಿನ ಆರ್ಥಿಕ ಸಮೀಕ್ಷೆಯನ್ನು ಸಂಸತ್ತಿನಲ್ಲಿ ಮಂಡಿಸಲಾಗುತ್ತದೆ.

## ಕಾಳಿದಾಸ ಸಹಕಾರ ಬ್ಯಾಂಕಿನ 2026ನೇ ನೂತನ ಕ್ಯಾಲೆಂಡರ್ ಬಿಡುಗಡೆ



**ಬೆಂಗಳೂರು:** ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್ ನಿಯಮಿತ, ಬೆಂಗಳೂರು, ಇದರ 2026ನೇ ಸಾಲಿನ ಕ್ಯಾಲೆಂಡರ್‌ನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ರವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರು, ನಿರ್ದೇಶಕರುಗಳು ಉಪಸ್ಥಿತರಿದ್ದರು.


## ದಿ ಮುಳಗುಂದ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಚೇರಮನ್ನ ಮತ್ತು ವ್ಹಾಯಿಸ್ ಚೇರಮನ್ನರ ಆಯ್ಕೆ



**ಮುಳಗುಂದ :** ದಿ ಮುಳಗುಂದ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಚೇರಮನ್ನರಾಗಿ ಶ್ರೀ ಎಸ್.ಎಮ್. ನೀಲಗುಂದ ಮತ್ತು ವ್ಹಾಯಿಸ್ ಚೇರಮನ್ನರಾಗಿ ಶ್ರೀ ಬಿ.ಸಿ. ಬಡ್ನಿ ರವರುಗಳು ಆಯ್ಕೆಯಾಗಿದ್ದಾರೆ.

ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರುಗಳಾಗಿ ಶ್ರೀ ಪಿ.ಎ. ವಂಟಕರ, ಶ್ರೀ ಎಸ್.ಸಿ. ಬಡ್ನಿ, ಶ್ರೀ ಎನ್. ಆರ್. ದೇಶಪಾಂಡೆ, ಶ್ರೀ ಆರ್.ಸಿ. ಕಮಾಜಿ, ಶ್ರೀ ಐ.ಎಮ್. ಶೇಖ, ಶ್ರೀ ಎಮ್.ಎಮ್. ಅದರಗುಂಚಿ, ಶ್ರೀ ಎಸ್.ಬಿ. ಹಾರೋಗೇರಿ, ಶ್ರೀ ವ್ಹಿ.ಎಚ್. ಯಲಿಗಾರ, ಶ್ರೀಮತಿ ಎಲ್.ಎಫ್. ಅಮೋಗಿಮಠ, ಶ್ರೀಮತಿ ಎ.ಎನ್. ನೀಲಗುಂದ ಆಯ್ಕೆಯಾಗಿರುತ್ತಾರೆ.

## ನಾಲ್ಕು ವರ್ಷಗಳಲ್ಲಿ ಆರ್‌ಬಿಐನಿಂದ ಯುಎಸ್ ಖಜಾನೆ ಹೂಡಿಕೆಗಳಲ್ಲಿ ಕುಸಿತ




**ನವದೆಹಲಿ :** ಬ್ಲೂಮ್‌ಬರ್ಗ್ ವಿಶ್ಲೇಷಣೆಯ ಪ್ರಕಾರ, ಕಳೆದ ನಾಲ್ಕು ವರ್ಷಗಳಲ್ಲಿ ಆರ್‌ಬಿಐನಿಂದ ಯುಎಸ್ ಖಜಾನೆ ಹೂಡಿಕೆಗಳಲ್ಲಿ ಇದು ಮೊದಲ ವಾರ್ಷಿಕ ಕುಸಿತವಾಗಿದೆ. ಹೆಚ್ಚುತ್ತಿರುವ ಜಾಗತಿಕ ಆರ್ಥಿಕ ಮತ್ತು ಭೌಗೋಳಿಕ ರಾಜಕೀಯ ಅಪಾಯಗಳ ಮಧ್ಯೆ ವಿದೇಶಿ ವಿನಿಮಯ ಮೀಸಲು ವೈವಿಧ್ಯೀಕರಣ ಮತ್ತು ಡಾಲರ್ ಅಲ್ಲದ ಸ್ವತ್ತುಗಳ ಕಡೆಗೆ ಕಾರ್ಯತಂತ್ರದ ಬದಲಾವಣೆಯಾಗಿ, ಭಾರತೀಯ ರಿಸರ್ವ್ ಬ್ಯಾಂಕ್ ಯುಎಸ್ ಖಜಾನೆ ಸೆಕ್ಯುರಿಟಿಗಳ ಹಿಡುವಳಿಯಲ್ಲಿ ಶೇ.21ರಷ್ಟು ಕಡಿತಗೊಳಿಸಿದೆ.

ಯುಎಸ್ ಖಜಾನೆ ಇಲಾಖೆಯ ಪ್ರಕಾರ, ಆರ್‌ಬಿಐ ಯುಎಸ್ ಬಾಂಡ್‌ಗಳ ಹಿಡುವಳಿ ಅಕ್ಟೋಬರ್ 31, 2024 ರಂದು ಡಾಲರ್ 241.4 ಬಿಲಿಯನ್‌ನಿಂದ ಅಕ್ಟೋಬರ್ 31, 2025 ರಂದು ಡಾಲರ್ 190.7 ಬಿಲಿಯನ್‌ಗೆ ಇಳಿದಿದೆ, ಇದು ಉತ್ತಮ ಆಸ್ತಿ ವೈವಿಧ್ಯೀಕರಣದ ಕಡೆಗೆ ಫಾರೆಕ್ಸ್ ತಂತ್ರದಲ್ಲಿ ಬದಲಾವಣೆಯನ್ನು ಸೂಚಿಸುತ್ತದೆ. ಯುಎಸ್ ಅಕ್ಟೋಬರ್–ಸೆಪ್ಟೆಂಬರ್ ನ್ನು ತನ್ನ ಹಣಕಾಸು ವರ್ಷವಾಗಿ ಅನುಸರಿಸುತ್ತದೆ.

ಬ್ಲೂಮ್‌ಬರ್ಗ್ ವಿಶ್ಲೇಷಣೆಯ ಪ್ರಕಾರ, ಕಳೆದ ನಾಲ್ಕು ವರ್ಷಗಳಲ್ಲಿ ಆರ್‌ಬಿಐನಿಂದ ಯುಎಸ್ ಖಜಾನೆ ಹೂಡಿಕೆಗಳಲ್ಲಿ ಇದು ಮೊದಲ ವಾರ್ಷಿಕ ಕುಸಿತವಾಗಿದೆ. ಯುಎಸ್ ಬಾಂಡ್‌ಗಳಲ್ಲಿ ತುಲನಾತ್ಮಕವಾಗಿ ಆಕರ್ಷಕ ಇಳುವರಿಯ ಹೊರತಾಗಿಯೂ ಡ್ರಾಡೌನ್ ದಾಖಲಾಗಿದೆ. ಈ ಅವಧಿಯಲ್ಲಿ, ಮಾನದಂಡದ 10–ವರ್ಷದ ಯುಎಸ್ ಬಾಂಡ್‌ಗಳ ಮೇಲಿನ ಆದಾಯ ಶೇ.4–4.8ರಷ್ಟು ವ್ಯಾಪ್ತಿಯಲ್ಲಿ ವಹಿವಾಟು ನಡೆಸಿತು. ಈ ಕಡಿದಾದ ಕಡಿತ ಆದಾಯ ಪರಿಗಣನೆಗಳಿಂದಲ್ಲ ಆದರೆ ಅಕ್ಟೋಬರ್‌ನಲ್ಲಿ ಸುಮಾರು ಡಾಲರ್ 700 ಬಿಲಿಯನ್‌ನಷ್ಟಿದ್ದ ಮೀಸಲು ಹಂಚಿಕೆಯ ಮರು ಮೌಲ್ಯಮಾಪನದಿಂದ ನಡೆಸಲ್ಪಟ್ಟಿದೆ ಎಂದು ತಜ್ಞರು ಹೇಳುತ್ತಾರೆ.

ವೈವಿಧ್ಯೀಕರಣದ ಭಾಗವಾಗಿ, ಆರ್‌ಬಿಐ ತನ್ನ ಚಿನ್ನದ ನಿಕ್ಷೇಪಗಳನ್ನು ನಿರ್ಮಿಸುತ್ತಿದೆ. 2024 ರಲ್ಲಿ ದಾಖಲೆಯ 64 ಟನ್ ಚಿನ್ನ ಖರೀದಿಯ ನಂತರ, ಕೇಂದ್ರ ಬ್ಯಾಂಕ್ 2025 ರಲ್ಲಿ ಹಳದಿ ಲೋಹವನ್ನು ಸೇರಿಸುವಲ್ಲಿ ನಿಧಾನವಾಗಿ ಸಾಗುತ್ತಿದೆ. ಇದು ಸೆಪ್ಟೆಂಬರ್ ಅಂತ್ಯದ ವೇಳೆಗೆ 880.8 ಟನ್‌ಗಳಷ್ಟಿತ್ತು. ಒಟ್ಟು ವಿದೇಶಿ ವಿನಿಮಯ ನಿಕ್ಷೇಪಗಳಲ್ಲಿ ಚಿನ್ನದ ಪಾಲು ಸೆಪ್ಟೆಂಬರ್ ವೇಳೆಗೆ ಶೇ.13.9ರಷ್ಟು ಏರಿತು, ಇದು ಹಿಂದಿನ ವರ್ಷದ ಅವಧಿಯಲ್ಲಿ ಶೇ. 9ರಷ್ಟಿತ್ತು.

2025 ರಲ್ಲಿ, ಆರ್‌ಬಿಐ ಸೆಪ್ಟೆಂಬರ್ ವರೆಗೆ ಕೇವಲ 4 ಟನ್‌ಗಳಷ್ಟು ಚಿನ್ನದ ನೇರ ಖರೀದಿಗಳನ್ನು ಮಾಡಿತು, ಆದರೆ ವಿದೇಶಿ ಕಮಾನುಗಳಿಂದ 64 ಟನ್‌ಗಳಷ್ಟು ಹಿಂದಕ್ಕೆ ತರುವ ಮೂಲಕ ತನ್ನ ದೇಶೀಯವಾಗಿ ಹೊಂದಿರುವ ನಿಕ್ಷೇಪಗಳನ್ನು ಗಮನಾರ್ಹವಾಗಿ ಹೆಚ್ಚಿಸಿತು. ಚೀನಾ ಕೂಡ ವರ್ಷದಲ್ಲಿ ತನ್ನ ಖಜಾನೆ ಹಿಡುವಳಿಯನ್ನು ಶೇ.9.3ರಷ್ಟು ಕಡಿಮೆ ಮಾಡಿ ಡಾಲರ್ 688.7 ಬಿಲಿಯನ್‌ಗೆ ಇಳಿಸಿದೆ.

## ಆಧಾರ್ ಅಪ್ಡೇಟ್ ಮಾಡದಿದ್ದರೆ ಯೋನೋ ಆ್ಯಪ್ ಬ್ಲಾಕ್ ಆಗಲಿದೆಯಾ? ಎಸ್‌ಬಿಐ ಸ್ಪಷ್ಟನೆ

**ಮುಂಬೈ :** ಇತ್ತೀಚಿನ ದಿನಗಳಲ್ಲಿ ಸೈಬರ್ ವಂಚನೆಗಳು ವಿಪರೀತವಾಗಿ ಹೆಚ್ಚುತ್ತಿವೆ. ವಂಚಕರು ಹಣ ಲೂಟಿ ಮಾಡಲು ಹೊಸ ಹೊಸ ತಂತ್ರಜ್ಞಾನ ಬಳಸುತ್ತಿದ್ದಾರೆ. ಈಗ ಎಸ್‌ಬಿಐ ಯೋನೋ ಆ್ಯಪ್‌ಗಳು ಸಂಬಂಧಿಸಿದಂತೆ, "ಆಧಾರ್ ಅಪ್ಡೇಟ್ ಮಾಡದಿದ್ದರೆ ನಿಮ್ಮ ಆ್ಯಪ್ ಬ್ಲಾಕ್ ಆಗುತ್ತದೆ" ಎಂಬ ಸಂದೇಶವೊಂದು ವೈರಲ್ ಆಗುತ್ತಿದೆ. ಇದರ ಬಗ್ಗೆ ಎಸ್‌ಬಿಐ ಮಹತ್ವದ ಎಚ್ಚರಿಕೆ ನೀಡಿದೆ.

**ನಡೆದಿದ್ದೇನು? :** ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಹಕರನ್ನು ಭಯಪಡಿಸುವ ರೀತಿಯಲ್ಲಿ "ತಕ್ಷಣವೇ ನಿಮ್ಮ ಆಧಾರ್ ಕಾರ್ಡ್ ವಿವರಗಳನ್ನು ಅಪ್ಡೇಟ್ ಮಾಡಿ, ಇಲ್ಲದಿದ್ದರೆ ನಿಮ್ಮ ಯೋನೋ ಆ್ಯಪ್ ಇಂದು ಬ್ಲಾಕ್ ಆಗಲಿದೆ" ಎಂಬುದು ಆ ಸಂದೇಶದ ಸಾರ. ಈ ಮೆಸೇಜ್ ನೋಡಿ ಗ್ರಾಹಕರು ಆತಂಕಕ್ಕೊಳಗಾಗಿದ್ದಾರೆ. ಆದರೆ, ಈ ಪ್ರಕಟಣೆಯನ್ನು ಎಸ್‌ಬಿಐ ಆಗಲಿ ಅಥವಾ ಕೇಂದ್ರ ಸರ್ಕಾರವಾಗಲಿ ನೀಡಿಲ್ಲ. ಇದು ಸೈಬರ್ ಖದೀಮರು ಹರಡುತ್ತಿರುವ ವದಂತಿ ಮಾತ್ರ!

**ಫ್ಯಾಕ್ಟ್ ಚೆಕ್ ಸ್ಪಷ್ಟನೆ :** ಈ ವೈರಲ್ ಮೆಸೇಜ್ ಬಗ್ಗೆ ಕೇಂದ್ರ ಸರ್ಕಾರದ 'ಪಿಐಬಿ ಫ್ಯಾಕ್ಟ್ ಚೆಕ್' ತಂಡ ತನಿಖೆ ನಡೆಸಿದ್ದು, ಇದು ಸಂಪೂರ್ಣವಾಗಿ ಸುಳ್ಳು ಎಂದು ತಿಳಿಸಿದೆ. ಎಸ್‌ಬಿಐ ಎಂದಿಗೂ ಇಂತಹ ಅನುಮಾನಾಸ್ಪದ ಲಿಂಕುಗಳ ಮೂಲಕ ಅಥವಾ ಎಪಿಕೆ ಫೈಲುಗಳ ಮೂಲಕ ಕೆವೈಸಿ ಅಪ್ಡೇಟ್ ಮಾಡಲು ಕೇಳುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

**ವಂಚನೆ ನಡೆಯುವುದು ಹೇಗೆ? :** ವಂಚಕರು ಕಳುಹಿಸುವ ಇಂತಹ ಮೆಸೇಜ್‌ಗಳಲ್ಲಿ ಹೆಚ್ಚಾಗಿ ಲಿಂಕುಗಳು ಅಥವಾ ಎಪಿಕೆ ಫೈಲ್‌ಗಳಿರುತ್ತವೆ. ಒಂದು ವೇಳೆ ನೀವು ಇಂತಹ ಲಿಂಕ್ ಕ್ಲಿಕ್ ಮಾಡಿದರೆ ಅಥವಾ ಫೈಲ್ ಡೌನ್ಲೋಡ್ ಮಾಡಿ ಇನ್ಸ್ಟಾಲ್ ಮಾಡಿದರೆ, ನಿಮ್ಮ ಫೋನ್ನ ಎಸ್‌ಎಂಎಸ್, ಕಾಂಟ್ಯಾಕ್ಟ್ ಮತ್ತು ಗ್ಯಾಲರಿ ಹ್ಯಾಕರ್ಸ್ ನಿಯಂತ್ರಣಕ್ಕೆ ಹೋಗುತ್ತದೆ. ನಿಮ್ಮ ಫೋನಿಗೆ ಬರುವ ಬ್ಯಾಂಕ್ ಒಟಿಪಿಗಳನ್ನು ಹ್ಯಾಕರ್ಸ್ ನೇರವಾಗಿ ನೋಡಬಹುದು. ಇದರ ಮೂಲಕ ನಿಮ್ಮ ಖಾತೆಯಿಂದ ಹಣವನ್ನು ನಿಮಗೆ ತಿಳಿಯದಂತೆ ಕದಿಯಲಾಗುತ್ತದೆ.

**ಎಸ್‌ಬಿಐ ಸಲಹೆಗಳು**

- **ಅಧಿಕೃತ ಆ್ಯಪ್ ಮಾತ್ರ ಬಳಸಿ:** ಗೂಗಲ್ ಪ್ಲೇ ಸ್ಟೋರ್ ಅಥವಾ ಆಪಲ್ ಆ್ಯಪ್ ಸ್ಟೋರ್‌ನಿಂದ ಮಾತ್ರ ಯೋನೋ ಆ್ಯಪ್ ಡೌನ್ಲೋಡ್ ಮಾಡಿ.
- **ಬ್ಯಾಂಕ್ ಶಾಖೆಗೆ ಭೇಟಿ ನೀಡಿ:** ಆಧಾರ್ ಅಥವಾ ಕೆವೈಸಿ ಅಪ್ಡೇಟ್ ಮಾಡಬೇಕಿದ್ದರೆ ನೇರವಾಗಿ ಬ್ಯಾಂಕ್ ಶಾಖೆಗೆ ಹೋಗಿ ಅಥವಾ ಅಧಿಕೃತ ವೆಬ್‌ಸೈಟ್ ಬಳಸಿ.
- **ಮಾಹಿತಿ ಹಂಚಿಕೊಳ್ಳಬೇಡಿ:** ನಿಮ್ಮ ಡೆಬಿಟ್ ಕಾರ್ಡ್ ಪಿನ್, ಒಟಿಪಿ, ಸಿವಿವಿ ವಿವರಗಳನ್ನು ಯಾರಿಗೂ ಹೇಳಬೇಡಿ ಅಥವಾ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಳ್ಳಬೇಡಿ.
- **ದೂರು ನೀಡಿ:** ಒಂದು ವೇಳೆ ನೀವು ಸೈಬರ್ ವಂಚನೆಗೆ ಒಳಗಾದರೆ ಅಥವಾ ಹಣ ಕಳೆದುಕೊಂಡರೆ ತಕ್ಷಣವೇ 1930 ಸಂಖ್ಯೆಗೆ ಕರೆ ಮಾಡಿ ಸೈಬರ್ ಕ್ರೈಮ್ ಪೊಲೀಸರಿಗೆ ದೂರು ನೀಡಿ.

**ಗಮನಿಸಿ :** ಬ್ಯಾಂಕುಗಳು ಎಂದಿಗೂ ನಿಮ್ಮ ವೈಯಕ್ತಿಕ ಮಾಹಿತಿಯನ್ನು ಇಂತಹ ಮೆಸೇಜುಗಳ ಮೂಲಕ ಕೇಳುವುದಿಲ್ಲ. ಜಾಗರೂಕರಾಗಿರಿ!




## ನಿಮ್ಮ ಪ್ರಶ್ನೆ ನಮ್ಮ ಉತ್ತರ



▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನ ಒಬ್ಬ ಸದಸ್ಯರ ಪತ್ನಿಗೆ ಬ್ಯಾಂಕಿನಿಂದ ಸಾಲ ನೀಡಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಳಗಾವಿ ಜಿಲ್ಲೆ.**

**ಉತ್ತರ:** ಭಾರತೀಯ ರಿಜರ್ವ್ ಬ್ಯಾಂಕ್ (ಪಟ್ಟಣ ಸಹಕಾರ ಬ್ಯಾಂಕುಗಳು – ಕ್ರೆಡಿಟ್ ರಿಸ್ಕ್ ಮ್ಯಾನೇಜ್‌ಮೆಂಟ್) ತಿದ್ದುಪಡಿ ನಿರ್ದೇಶನ 2026 ಅನ್ನು ಜನವರಿ 05, 2026ರಂದು ಹೊರಡಿಸಲಾಯಿತು. ಈ ತಿದ್ದುಪಡಿಗಳ ಪ್ಯಾರಾ 3 (ivಎ)ರ ಪ್ರಕಾರ "ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ದೇಶಕರು" ಎಂಬುದು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಕಲಂ 20ರ(ಬಿ)ರಲ್ಲಿ ವ್ಯಾಖ್ಯಾನಿಸಲಾದ ಅದೇ ಅರ್ಥವನ್ನು ಹೊಂದಿರುತ್ತದೆ ಮತ್ತು ನಿರ್ವಹಣಾ ಮಂಡಳಿಯ (BoM) ಸದಸ್ಯರನ್ನು ಒಳಗೊಂಡಿರುತ್ತದೆ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಕಲಂ 20 ನಿರ್ದೇಶಕರಿಗೆ ನೀಡಲಾಗುವ ಸಾಲಗಳ ಮೇಲೆ ಇರುವ ನಿರ್ಬಂಧಗಳ ಕುರಿತಾಗಿದೆ. BoMನ ಸದಸ್ಯರು ಸಾಲ ಪಡೆಯುವ ವಿಷಯದಲ್ಲಿ ಬ್ಯಾಂಕಿನ ನಿರ್ದೇಶಕರೊಂದಿಗೆ ಸಮನಾಗಿರುವುದರಿಂದ ನಿರ್ದೇಶಕರಿಗೆ ಅನ್ವಯಿಸುವ ಎಲ್ಲಾ ನಿರ್ಬಂಧಗಳು BoM ಸದಸ್ಯರಿಗೂ ಸ್ವಯಂಚಾಲಿತವಾಗಿ ಅನ್ವಯಿಸುತ್ತವೆ. ಆದ್ದರಿಂದ ಬ್ಯಾಂಕಿನ BoMನ ಸದಸ್ಯರ ಪತ್ನಿಗೆ ಹೂಡಿಕೆಗೋಸ್ಕರ ಸಾಲ ನೀಡುವಂತಿಲ್ಲ.

**02. ರಿಜರ್ವ್ ಬ್ಯಾಂಕಿನ ಜನವರಿ 05, 2026ರ ಕ್ರೆಡಿಟ್ ರಿಸ್ಕ್ ಮ್ಯಾನೇಜ್‌ಮೆಂಟ್‌ನ ತಿದ್ದುಪಡಿ ನಿರ್ದೇಶನದ ರೀತ್ಯಾ ಬ್ಯಾಂಕಿನ ನಿರ್ದೇಶಕರ ಪರಸ್ಪರ ಸಂಬಂಧ ಹೊಂದಿರುವ ವ್ಯಕ್ತಿಗಳಿಗೆ (Reciprocally Related Person) ಬ್ಯಾಂಕಿನಿಂದ ಸಾಲ ನೀಡಬಾರದು ಇದರ ಅರ್ಥವೇನು? ಉದಾಹರಣೆಯೊಂದಿಗೆ ವಿವರಿಸಿ.**

**▸▸ ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ** : "ಪರಸ್ಪರ ಸಂಬಂಧಿತ ವ್ಯಕ್ತಿ" (Reciprocally Related Persons - RRP) ಎಂದರೆ ಯಾರು?

ಸರಳವಾಗಿ ಹೇಳುವುದಾದರೆ, ಒಂದು ಬ್ಯಾಂಕಿನ ನಿರ್ದೇಶಕರು ಮತ್ತೊಂದು ಬ್ಯಾಂಕಿನ ನಿರ್ದೇಶಕರೊಂದಿಗೆ "ಒಪ್ಪಂದ" ಮಾಡಿಕೊಂಡು ಸಾಲ ಪಡೆಯುವುದನ್ನು ತಡೆಯಲು ಈ ನಿಯಮ ತರಲಾಗಿದೆ.

**RRP ಪಟ್ಟಿಗೆ ಇವರು ಬರುತ್ತಾರೆ:**

- **ಇತರ ಸಹಕಾರಿ ಬ್ಯಾಂಕ್‌ಗಳ ನಿರ್ದೇಶಕರು:** ನಿಮ್ಮ ಬ್ಯಾಂಕ್ ಅಲ್ಲದ ಬೇರೆ ಯಾವುದೇ ಸಹಕಾರಿ ಬ್ಯಾಂಕ್‌ನಲ್ಲಿ ನಿರ್ದೇಶಕರಾಗಿರುವ ವ್ಯಕ್ತಿಗಳು.
- **ನಿರ್ವಹಣಾ ಮಂಡಳಿಯ ಸದಸ್ಯರು (BoM Members)** : ಬೇರೆ ಬ್ಯಾಂಕುಗಳ ಮಂಡಳಿಯ ಸದಸ್ಯರು.
- **ಸಂಬಂಧಿಕರು:** ಅಂತಹ ನಿರ್ದೇಶಕರ ಅಥವಾ ಮಂಡಳಿ ಸದಸ್ಯರ ಹತ್ತಿರದ ಸಂಬಂಧಿಕರು.

**ಇದರ ಉದ್ದೇಶ ಮತ್ತು ಪರಿಣಾಮಗಳು (Consequences)**

- ಹಿಂದೆ, ಒಬ್ಬ ನಿರ್ದೇಶಕ ತನ್ನ ಸ್ವಂತ ಬ್ಯಾಂಕಿನಲ್ಲಿ ಸಾಲಪಡೆಯಲು ಕಾನೂನುಬದ್ಧವಾಗಿ ಅಸಾಧ್ಯವಾಗಿತ್ತು. ಹಾಗಾಗಿ, ನಿರ್ದೇಶಕರು ಬೇರೆ ಬ್ಯಾಂಕ್‌ಗಳ ನಿರ್ದೇಶಕರನ್ನು ಸಂಪರ್ಕಿಸಿ, "ನಾನು ನಿಮಗೆ ನಮ್ಮ ಬ್ಯಾಂಕಿನಲ್ಲಿ ಸಾಲ ಕೊಡಿಸುತ್ತೇನೆ, ನೀವು ನನಗೆ ನಿಮ್ಮ ಬ್ಯಾಂಕಿನಲ್ಲಿ ಸಾಲ ಕೊಡಿಸಿ" ಎಂಬ ಸೌಹಾರ್ದಯುತ ಅಥವಾ ಗುಪ್ತ ಒಪ್ಪಂದ ಮಾಡಿಕೊಳ್ಳುತ್ತಿದ್ದರು. ಇದನ್ನು "Quid Pro Quo" ಎನ್ನಲಾಗುತ್ತದೆ.

**ಒಂದು ಉದಾಹರಣೆ (Scenario)**

**ಸಂದರ್ಭ :**

- **ಶ್ರೀ ಸುರೇಶ್** : ಇವರು 'ಜನತಾ ಕೋ–ಆಪರೇಟಿವ್ ಬ್ಯಾಂಕ್'ನ ನಿರ್ದೇಶಕರು.
- **ಶ್ರೀ ರಮೇಶ್** : ಇವರು 'ಮೈದಾನ ಕೋ–ಆಪರೇಟಿವ್ ಬ್ಯಾಂಕ್'ನ ನಿರ್ದೇಶಕರು.

  **ಹಳೆಯ ಪದ್ಧತಿ :** ಸುರೇಶ್ ಅವರಿಗೆ 50 ಲಕ್ಷರೂ. ಸಾಲ ಬೇಕಾದಾಗ, ಅವರು ರಮೇಶ್ ಅವರ ಬ್ಯಾಂಕಿಗೆ ಹೋಗಿ ಸಾಲ ಪಡೆಯುತ್ತಿದ್ದರು. ಪ್ರತಿಯಾಗಿ ರಮೇಶ್ ಅವರ ಸಂಬಂಧಿಕರಿಗೆ ಸುರೇಶ್ ಅವರು ತಮ್ಮ ಬ್ಯಾಂಕಿನಲ್ಲಿ ಸಾಲ ಕೊಡಿಸುತ್ತಿದ್ದರು.
- **2026ರ ಹೊಸ ನಿಯಮದ ಅನ್ವಯ :** ಈಗ ಸುರೇಶ್ ಅವರು ರಮೇಶ್ ಅವರ ಬ್ಯಾಂಕಿಗೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿದರೆ, ರಮೇಶ್ ಅವರ ಬ್ಯಾಂಕ್ ಸುರೇಶ್ ಅವರನ್ನು "ಪರಸ್ಪರ ಸಂಬಂಧಿತ ವ್ಯಕ್ತಿ" **(RRP)** ಎಂದು ಗುರುತಿಸುತ್ತದೆ. ಆರ್‌ಬಿಐ ನಿಯಮದಂತೆ ರಮೇಶ್ ಅವರ ಬ್ಯಾಂಕ್ ಸುರೇಶ್ ಅವರಿಗೆ ಅಥವಾ ಅವರ ಸಂಬಂಧಿಕರಿಗೆ ಸಾಲ ನೀಡುವಂತಿಲ್ಲ. ಒಂದು ವೇಳೆ ನೀಡಿದರೆ, ಅದು ಆರ್‌ಬಿಐ ನಿಯಮಗಳ ಗಂಭೀರ ಉಲ್ಲಂಘನೆಯಾಗುತ್ತದೆ.

**03. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI) 2026ರ ತಿದ್ದುಪಡಿ ನಿರ್ದೇಶನಗಳ ಪ್ರಕಾರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರು ತಮ್ಮ ಬ್ಯಾಂಕಿನಿಂದ ಸಾಲ ಪಡೆಯಲು ಅವಕಾಶವಿದೆ?**

**▸▸ ಪಟ್ಟಣ ಸಹಕಾರ ಬ್ಯಾಂಕ್ ಲಿ., ಮಂಗಳೂರು.**

**ಉತ್ತರ** : ಹೌದು, ಇತ್ತೀಚಿನ ತಿದ್ದುಪಡಿಯ ನಂತರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರು (ಅಧ್ಯಕ್ಷರು, MD, CEO ಮತ್ತು BoM ಸದಸ್ಯರು ಸೇರಿದಂತೆ) ತಮ್ಮ ಬ್ಯಾಂಕಿನಿಂದ ಸಾಲ ಪಡೆಯಲು ಅವಕಾಶವಿದೆ. ಆದರೆ ಇದು ಕೆಲವು ಕಟ್ಟುನಿಟ್ಟಾದ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

ಇದರ ಪ್ರಮುಖ ಅಂಶಗಳು ಇಲ್ಲಿವೆ:

**1. ಯಾವ ರೀತಿಯ ಸಾಲ ಪಡೆಯಬಹುದು?**

ನಿರ್ದೇಶಕರು ಕೇವಲ "ವೈಯಕ್ತಿಕ ಸಾಲಗಳನ್ನು" (Personal Loans) ಮಾತ್ರ ಪಡೆಯಬಹುದು. ಇದರಲ್ಲಿ ಈ ಕೆಳಗಿನವು ಸೇರಿವೆ:

- ಗೃಹಸಾಲ (Housing Loan)
- ವಾಹನಸಾಲ (Vehicle Loan)
- ಗ್ರಾಹಕ ಬಾಳಿಕೆ ವಸ್ತುಗಳ ಸಾಲ (Consumer Durable Loan)
- ಶಿಕ್ಷಣ ಸಾಲ (Education Loan)

**2. ಸಾಲದ ಮಿತಿ ಎಷ್ಟು?**

ಇಲ್ಲಿ ಅತ್ಯಂತ ಪ್ರಮುಖವಾದ ನಿಯಮವೆಂದರೆ "ನೌಕರರಿಗೆ ನೀಡುವ ಮಿತಿ" (Employee Limits).

7ನೇ ಪುಟಕ್ಕೆ...

# ಡಿಸೆಂಬರ್ ತ್ರೈಮಾಸಿಕದಲ್ಲಿ ಸಾಲ - ಠೇವಣಿ ಅನುಪಾತ ಶೇ.81 ಕ್ಕೆ ಏರಿಕೆ ಸಾಲಕ್ಕೆ ಬೇಡಿಕೆ, ಠೇವಣಿ ಇಳಿಕೆ


**ಹೊಸದಿಲ್ಲಿ:** ದೇಶದ ಖಾಸಗಿ ಮತ್ತು ಸಾರ್ವಜನಿಕ ಬ್ಯಾಂಕ್‌ಗಳಲ್ಲಿ ಸಾಲ–ಠೇವಣಿ ಅನುಪಾತವು (ಎಲ್‌ಡಿಆರ್) ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ.81ಕ್ಕೆ ಮುಟ್ಟಿದೆ. ಬ್ಯಾಂಕ್‌ಗಳಲ್ಲಿ ಠೇವಣಿ ಇಡುವವರ ಪ್ರಮಾಣ ಕುಸಿದಿದೆ. ಸಾಲಕ್ಕಾಗಿ ಬೇಡಿಕೆ ಮಾತ್ರ ದಿನೇದಿನೆ ಬೆಳೆಯುತ್ತಲೇ ಇದೆ. ಇದು ಬ್ಯಾಂಕುಗಳಿಗೆ ದೊಡ್ಡ ಸವಾಲನ್ನು ಒಡ್ಡಿದೆ. ನಿಧಿಯನ್ನು ಸಂಗ್ರಹಿಸಲು ಹರಸಾಹಸ ಮಾಡಬೇಕಾಗಿದೆ.

**ಗ್ರಾಹಕರಿಗೆ ತಾಪತ್ರಯ :** ಠೇವಣಿ ಸಂಗ್ರಹ ಕುಸಿದಾಗ ಮುಂದಿನ ದಿನಗಳಲ್ಲಿ ಸಾಲಗಳು ದುರ್ಗಮವಾಗಬಹುದು. ಬಡ್ಡಿದರ ಹೆಚ್ಚಬಹುದು. ಆರ್‌ಬಿಐ ಬಡ್ಡಿದರ ಇಳಿಸಿದಾಗ ಅದು ಅಷ್ಟೇ ಪ್ರಮಾಣದಲ್ಲಿ ಮತ್ತು ತ್ವರಿತವಾಗಿ ಗ್ರಾಹಕರನ್ನು ತಲುಪದೇ ಇರಬಹುದು. ಠೇವಣಿ ಹೆಚ್ಚಳಕ್ಕೆ ಬಡ್ಡಿ ದರವನ್ನು ಏರಿಸುವುದನ್ನು ಹೆಚ್ಚು ನೆಚ್ಚಿಕೊಳ್ಳಬೇಕಾಗುತ್ತದೆ ಎಂದು ಹಣಕಾಸು ತಜ್ಞರು ಎಚ್ಚರಿಸಿದ್ದಾರೆ.

**ಸಾರ್ವಜನಿಕ ವಲಯದ ಬ್ಯಾಂಕುಗಳದ್ದೂ ಇದೇ ಕತೆ :** ಬ್ಯಾಂಕ್ ಆಫ್ ಬರೋಡಾದ ಸಾಲದ ಪ್ರಮಾಣ ಡಿಸೆಂಬರ್‌ನಲ್ಲಿ ಶೇ. 14.57 ರಷ್ಟು ಏರಿಕೆಯಾಗಿ 13.44 ಲಕ್ಷ ಕೋಟಿ ರೂ. ಮುಟ್ಟಿತು. ಠೇವಣಿ ಏರಿಕೆ ಮಾತ್ರ ಶೇ. 10.25ರಷ್ಟು ಮಾತ್ರ ಜಿಗಿದು 15.47 ಲಕ್ಷ ಕೋಟಿ ರೂ.ಗೆ ಮುಟ್ಟಿದೆ. ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ಸಾಲದ ಬೆಳವಣಿಗೆ ಶೇ.11, ಠೇವಣಿ ಬೆಳವಣಿಗೆ ಶೇ.8.5.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಸಾಲ ಪಡೆದವರ ಪ್ರಮಾಣದಲ್ಲಿ ಏರಿಕೆಯು ಶೇ.7.13ರಷ್ಟಿದ್ದರೆ ಠೇವಣಿ ಇಡುವವರ ಪ್ರಮಾಣ ಶೇ.3.4ಕ್ಕೆ ಕುಸಿದಿದೆ.

**ಬ್ಯಾಂಕೇತರ ಹಣಕಾಸು ಸಂಸ್ಥೆಗಳ ಬೆಳವಣಿಗೆ :** ಬ್ಯಾಂಕೇತರ ಹಣಕಾಸು ಸಂಸ್ಥೆಗಳಾದ ಬಜಾಜ್ ಫೈನಾನ್ಸ್, ಪೂನಾವಾಲಾ ಫಿನ್‌ಕಾರ್ಪ್, ಮತ್ತು ಮಹೀಂದ್ರಾ ಫೈನಾನ್ಸ್ ಕೂಡ ಸಾಲದ ಮಾರುಕಟ್ಟೆಯಲ್ಲಿ ಬಲವಾದ ಬೆಳವಣಿಗೆಯನ್ನು ದಾಖಲಿಸಿವೆ. ಬಜಾಜ್ ಫೈನಾನ್ಸ್‌ನ ನಿರ್ವಹಣೆಯ ಆಸ್ತಿ (ಎಯುಎಂ) ಶೇ.22ರಷ್ಟು ಏರಿಕೆಯಾಗಿದೆ.



"ಸಾಲದ ಬೇಡಿಕೆಯಲ್ಲಿ ಏರಿಕೆಯಾಗಿ ಠೇವಣಿಗಳ ಪ್ರಮಾಣದಲ್ಲೂ ಹೆಚ್ಚಳವಾದರೆ ಒಳಿತು. ಆದರೆ ಈಗ ಠೇವಣಿ ಬೆಳವಣಿಗೆ ಪ್ರಮಾಣ ಕುಂಠಿತಗೊಂಡಿದೆ. 2026–2027ನೇ ಹಣಕಾಸು ವರ್ಷದಲ್ಲಿ ಸಾಲ ಮತ್ತು ಠೇವಣಿ ಅನುಪಾತವನ್ನು ಶೇ.90ಕ್ಕೆ ತರುವ ಗುರಿಯನ್ನು ಹೊಂದಲಾಗಿದೆ. ಇದು ಸಾಧ್ಯವಾಗಬೇಕಾದರೆ ಮಾರ್ಚ್ ತ್ರೈಮಾಸಿಕದಲ್ಲಿ ಠೇವಣಿ ಪ್ರಮಾಣ ವೃದ್ಧಿಯಾಗಬೇಕು," ಹಣಕಾಸು ತಜ್ಞರು ಹೇಳಿದ್ದಾರೆ.

**ಖಾಸಗಿ ಬ್ಯಾಂಕ್‌ಗಳಲ್ಲೂ ಠೇವಣಿ ನಿರುತ್ಸಾಹ :** ದೇಶದ ಅತಿದೊಡ್ಡ ಖಾಸಗಿ ಬ್ಯಾಂಕ್ ಆಗಿರುವ ಎಚ್‌ಡಿಎಫ್‌ಸಿ ಕಳೆದ ವರ್ಷಕ್ಕೆ ಹೋಲಿಸಿದರೆ ಡಿಸೆಂಬರ್ ತ್ರೈಮಾಸಿಕದಲ್ಲಿ ಸಾಲ ನೀಡಿಕೆ ಪ್ರಮಾಣ ಶೇ.12ರಷ್ಟಿದ್ದರೆ ಠೇವಣಿ ಪ್ರಮಾಣ ಶೇ. 11.5ರಷ್ಟಿತ್ತು. ಜೂನ್ ತ್ರೈಮಾಸಿಕದಲ್ಲಿ ಠೇವಣಿ ಸಂಗ್ರಹ ಶೇ. 16 ಇತ್ತು. ಈಗ ಬ್ಯಾಂಕಿನ ಒಟ್ಟು ಸಾಲದ ಪ್ರಮಾಣ ರೂ. 28.44 ಲಕ್ಷಕೋಟಿ ಆಗಿದ್ದರೆ ಠೇವಣಿ ಮೊತ್ತ ರೂ. 28.59 ಲಕ್ಷ ಕೋಟಿ ಆಗಿದೆ. ಇದರಿಂದ ಈ ಬ್ಯಾಂಕಿನ ಸಾಲ ಮತ್ತು ಠೇವಣಿ ಅನುಪಾತ ಶೇ.100ಕ್ಕೆ ಸಮೀಪಿಸಿದೆ. ಡಿಸೆಂಬರ್ ಅಂತ್ಯದ ವೇಳೆಗೆ ಈ ಬ್ಯಾಂಕ್ ನೀಡಿದ ಸಾಲದ ಪ್ರಮಾಣ ರೂ. 28.44 ಲಕ್ಷ ಕೋಟಿ ಇತ್ತು.

...6ನೇ ಪುಟದಿಂದ

- ಬ್ಯಾಂಕಿನ ಒಬ್ಬ ಸಾಮಾನ್ಯ ಉದ್ಯೋಗಿಗೆ ಎಷ್ಟು ಮೊತ್ತದ ಸಾಲ ನೀಡಲು ಬ್ಯಾಂಕಿನ ನೀತಿ (Policy) ಅನುಮತಿಸುತ್ತದೆಯೋ, ಅಷ್ಟೇ ಮೊತ್ತದ ಸಾಲವನ್ನು ನಿರ್ದೇಶಕರು ಪಡೆಯಬಹುದು.
- ಉದಾಹರಣೆಗೆ : ಬ್ಯಾಂಕಿನ ಅಧಿಕಾರಿಯೊಬ್ಬರಿಗೆ ಗರಿಷ್ಠ 10 ಲಕ್ಷ ರೂಪಾಯಿ ವೈಯಕ್ತಿಕ ಸಾಲ ಸಿಗುವುದಾದರೆ, ನಿರ್ದೇಶಕರಿಗೂ ಅಷ್ಟೇ ಮಿತಿ ಇರುತ್ತದೆ. ಅದಕ್ಕಿಂತ ಹೆಚ್ಚಿನ ಮೊತ್ತ ಪಡೆಯುವಂತಿಲ್ಲ.

**3. ನಿಬಂಧನೆಗಳು ಮತ್ತು ಷರತ್ತುಗಳು**

- ಪ್ರತಿ ನಿರ್ದೇಶಕರಿಗೆ ನೀಡುವ ವೈಯಕ್ತಿಕ ಸಾಲದ ಒಟ್ಟು ಮೊತ್ತ ಪ್ರತಿ ಶ್ರೇಣಿಯ ಬ್ಯಾಂಕಿಗೆ ರಿಸರ್ವ್ ಬ್ಯಾಂಕ್ ವಿಧಿಸಿದ ಗರಿಷ್ಠ ಮಿತಿಯನ್ನು ಮೀರಬಾರದು.
- **ವ್ಯಾಪಾರ ಸಾಲಗಳಿಗೆ ಅವಕಾಶವಿಲ್ಲ :** ನಿರ್ದೇಶಕರು ತಮ್ಮ ಸ್ವಂತ ಉದ್ಯಮ ಅಥವಾ ಕಂಪನಿಗಳ ಹೆಸರಿನಲ್ಲಿ ಸಾಲ ಪಡೆಯುವಂತಿಲ್ಲ.
- **ಸಮಾನ ನಿಯಮಗಳು :** ಬ್ಯಾಂಕ್ ಉದ್ಯೋಗಿಗಳಿಗೆ ವಿಧಿಸುವ ಅಷ್ಟೇ ಬಡ್ಡಿದರ ಮತ್ತು ಮರುಪಾವತಿ ನಿಯಮಗಳು ನಿರ್ದೇಶಕರಿಗೂ ಅನ್ವಯಿಸುತ್ತವೆ.
- **ಪಾರದರ್ಶಕತೆ :** ನಿರ್ದೇಶಕರು ತಮಗೆ ಸಾಲ ಮಂಜೂರು ಮಾಡುವ ಸಭೆಯಲ್ಲಿ ಭಾಗವಹಿಸುವಂತಿಲ್ಲ (Recusal).

**4. ಇತರ ವಿನಾಯಿತಿಗಳು**

ಕೆಳಗಿನ ಆಸ್ತಿಗಳ ಮೇಲೆ ಸಾಲ ಪಡೆಯಲು ಮೊದಲಿನಿಂದಲೂ ಅವಕಾಶವಿದೆ:

- ತಮ್ಮದೇ ಹೆಸರಿನಲ್ಲಿರುವ ಸ್ಥಿರಠೇವಣಿ (Fixed Deposits).
- ಸರ್ಕಾರಿ ಬಾಂಡ್‌ಗಳು ಅಥವಾ ಜೀವವಿಮಾ ಪಾಲಿಸಿಗಳು (LIC).

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಕೊಪ್ಪಳ, ಕುಷ್ಟಗಿ ಮತ್ತು ಕನಕಗಿರಿ ತಾಲ್ಲೂಕುಗಳ ಒಣ ಭೂಮಿಯಲ್ಲಿ ರೈತರು 'ಬಂಗಾರದ ಮನುಷ್ಯ' ಡಾ.ರಾಜ್ ಕುಮಾರ್ ಅವರು 'ಆಗದು ಎಂದು ಕೈ ಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ' ಹಾಡಿನಿಂದ ಸ್ಫೂರ್ತಿಯನ್ನು ಪಡೆದು, ತಮ್ಮ ಬಂಜರು ಭೂಮಿಯಲ್ಲೇ ವಿದೇಶಿ ಹಣ್ಣುಗಳಾದ ಡ್ರ್ಯಾಗನ್ ಫ್ರೂಟ್, ಸ್ಟಾರ್ ಫ್ರೂಟ್, ಜಪಾನಿನ ಮಿಯಾಜಾಕಿ ಚೀನಾದ ಕಿತ್ತಳೆ, ರಾಮ್ಬುಟಾನ್, ಮಲೇಷಿಯಾ ಗುವಾವಾ, ಲಿಚ್ಚಿ, ಪ್ಲಮ್, ಸ್ಟಾರ್ ಫ್ರೂಟ್ ಸೇರಿದಂತೆ ಹಲವು ವಿದೇಶಿ ಹಣ್ಣುಗಳನ್ನು ಬೆಳೆಯುತ್ತಿದ್ದಾರೆ. ಈ ಮೂಲಕ ನೀರಿನ ಕೊರತೆಯ ಹೊರತಾಗಿಯೂ ಸುಸ್ಥಿರ ಜೀವನೋಪಾಯವನ್ನು ಸೃಷ್ಟಿಸಿಕೊಂಡಿದ್ದಾರೆ.
- ಪಶ್ಚಿಮ ಘಟ್ಟಗಳ ಸಂರಕ್ಷಣಾ ವರದಿಯನ್ನು ರಚಿಸಿದ್ದ ಹಿರಿಯ ಪರಿಸರ ವಿಜ್ಞಾನಿ, ಪರಿಸರವಾದಿ ಮತ್ತು ಬರಹಗಾರ ಡಾ. ಮಾಧವ ಗಾಡ್ಗೀಳ್ ಅವರು ಅನಾರೋಗ್ಯದಿಂದ ನಿಧನರಾಗಿದ್ದಾರೆ ಅವರಿಗೆ 83 ವರ್ಷ ವಯಸ್ಸಾಗಿತ್ತು.
- ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ವಯೋಮಾನದ ಜನರಿಗೆ, ವಿಶೇಷವಾಗಿ ಗೃಹಿಣಿಯರಿಗೆ ನಗರ ತೋಟಗಾರಿಕೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ತೋಟಗಾರಿಕೆಯಲ್ಲಿ ಕೀಟನಾಶಕಗಳನ್ನು ಬಳಸದೆ ಸಾವಯವವಾಗಿ ತರಕಾರಿಗಳನ್ನು ಬೆಳೆಯುವುದು ಹೇಗೆ ಎಂದು ಹೇಳಿಕೊಡಲಾಗುತ್ತದೆ.
- ನಟ ಅಮಿತಾಭ್ ಬಚ್ಚನ್ ಅವರು ಬರೋಬ್ಬರಿ 120 ಕೋಟಿ ರೂಪಾಯಿ ತೆರಿಗೆಯನ್ನು ಪಾವತಿಸಿ, ದೇಶದ ಅತಿ ಹೆಚ್ಚು ತೆರಿಗೆ ಪಾವತಿಸಿದ ವೈಯಕ್ತಿಕ ವ್ಯಕ್ತಿಯಾಗಿ ಹೊರಹೊಮ್ಮಿದ್ದಾರೆ. 82 ವರ್ಷ ವಯಸ್ಸಿನಲ್ಲೂ, ಸುಮಾರು 350 ಕೋಟಿ ರೂಪಾಯಿ ಆದಾಯ ಗಳಿಸಿರುವ ಅವರು, ತೆರಿಗೆ ಪಾವತಿಯಲ್ಲಿ ಶೇ.69ರಷ್ಟು ಹೆಚ್ಚಳ ಕಂಡಿದ್ದಾರೆ.
- ಭಾರತದಲ್ಲಿ ರಸ್ತೆ ಅಪಘಾತದಲ್ಲಿ ಗಾಯಗೊಂಡವರಿಗೆ ಸಹಾಯ ಮಾಡಲು ಜನರ ಪ್ರೋತ್ಸಾಹಿಸಲು 'ರಾಹ್-ವೀರ್' ಅಥವಾ ರಸ್ತೆಯ ವೀರ ಯೋಜನೆ ಜಾರಿಯಾಗಿದೆ. ಅಪಘಾತವಾದ ಒಂದು ಗಂಟೆಯೊಳಗೆ ಸಂತ್ರಸ್ತರನ್ನು ಆಸ್ಪತ್ರೆಗೆ ಸೇರಿಸುವವರಿಗೆ ರೂ. 25,000 ಬಹುಮಾನ ಮತ್ತು ಕಾನೂನು ರಕ್ಷಣೆ ನೀಡಲಾಗುತ್ತದೆ. ಇದು ಅಮೂಲ್ಯ ಜೀವಗಳನ್ನು ಉಳಿಸಲು ಮತ್ತು ಉತ್ತಮ ಯೋಜನೆಯಾಗಿದೆ

## ಓದುಗರ ಅನಿಸಿಕೆ...



**ಬೆಳಕು ತೋರುವವರಾರು :** ನಮ್ಮ ದೇಶದ ಯುವಜನರು ಪ್ರಸಕ್ತ ಸಂದರ್ಭದಲ್ಲಿ ಸಮಸ್ಯೆಗಳ ಸರಮಾಲೆಯನ್ನೇ ಎದುರಿಸುತ್ತಿದ್ದಾರೆ. ಮುಂದೆ ಈ ದೇಶವನ್ನು ಮುನ್ನೆಡಸಬೇಕಾದ ಯುವಜನರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡಿದ್ದಾರೆ. ಜೊತೆಗೆ ಉದ್ಯೋಗವಿಲ್ಲದೆ ಆರ್ಥಿಕವಾಗಿ ಪೋಷಕರ ಮೇಲೆ ಅವಲಂಬಿಸಬೇಕಾಗಿದೆ. ಹೀಗೆ ಆತ್ಮವಿಶ್ವಾಸವನ್ನು ಕಳೆದುಕೊಂಡಿರುವವರಿಗೆ ಬೆಳಕು ತೋರುವವರಾರು ಎನ್ನುವಂತಾಗಿದೆ.

**▸▸ ಜೆ. ಲಕ್ಷ್ಮೀನಾರಾಯಣ, ತುಮಕೂರು**

**ಶುಭ ಹಾರೈಕೆಗಳು :** ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ನೂತನ ಆಡಳಿತ ಮಂಡಳಿಯ ನಿರ್ದೇಶಕರುಗಳ ಸ್ಥಾನಗಳಿಗೆ ಮುಂದಿನ ಐದು ವರ್ಷಗಳ ಅವಧಿಗೆ ಆಯ್ಕೆಯಾಗಿರುವವರಿಗೆ ರಾಜ್ಯದ ಎಲ್ಲಾ ಸಹಕಾರಿಗಳ ಪರವಾಗಿ ಅಭಿನಂದನೆಗಳು. ನೂತನ ತಂಡದಲ್ಲಿ ಸಹಕಾರ ಕ್ಷೇತ್ರದ ಇಳಹೊರಗನಗನು ಬಲ್ಲ ಹಿರಿಯರು ಕಿರಿಯರು ವಿವಿಧ ಕ್ಷೇತ್ರಗಳ ಪ್ರತಿಭಾನ್ವಿತ ಪರಿಣಿತರುಗಳಿಂದ ಕೂಡಿದೆ. ಎಲ್ಲರಿಗೂ ಶುಭ ಹಾರೈಕೆಗಳು.

**▸▸ ಪಿ. ಚನ್ನಬಸಪ್ಪ ಹಿರೇಮಠ, ದಾವಣಗೆರೆ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.